# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-(1) ಶ್ರೀ ಚನ್ನಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೈಲನರಸಾಪುರ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು ಹಾಗೂ (2) ಶ್ರೀ ಅರುಣ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊಸಕೋಟೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧ ಮಾನ್ಯ ಉಪಲೋಕಾಯುಕ್ತರ ಶಿಫಾಸ್ಸಿನಂತೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಆದೇಶ.

ಓದಲಾಗಿದೆ:-ಮಾನ್ಯ ಉಪ ಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.12(3)ರಡಿ ಸಲ್ಲಿಸಿರುವ ವರದಿ ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಡಿ-1430/ 2015/ಸನಿಕಾಸ - 2, ದಿನಾಂಕ:03-05-2017.

-000-

ಪ್ರಸ್ತಾವನೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ: -05-2017ರ ಅ.ಸ.ಪತ್ರದಲ್ಲಿ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರ ದಿನಾಂಕ:03-05-2017ರ ವರದಿ ಮತ್ತು ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸುತ್ತಾ, ಸರ್ಕಾರದ ನಿರ್ಣಯವನ್ನು ಲೋಕಾಯುಕ್ತ ಕಛೇರಿಗೆ ಸಲ್ಲಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀ ಕೆ.ಎಂ.ಮುನಿರಾಜು, ಕೊರಟಿ ಗ್ರಾಮ, ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ತಮ್ಮ ದೂರಿನಲ್ಲಿ 1ನೇ ಎದುರುದಾರರಾದ ಶ್ರೀ ಚನ್ನಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೈಲನರಸಾಪುರ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು ಹಾಗೂ 3ನೇ ಎದುರುದಾರರಾದ ಶ್ರೀ ಅರುಣ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊಸಕೋಟೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ.9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದೆ ಎಂದು ವರದಿಸಿರುತ್ತಾರೆ.

| ಎದುರುದಾರರ ಹೆಸರು ಮತ್ತು ವಿವರ | ಎದುರುದಾರರ ಸಂಖ್ಯೆ |
|---|---|
| 1)ಶ್ರೀ ಚನ್ನಪ್ಪ,ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೈಲನರಸಾಪುರ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು | 1 |
| 2)ಶ್ರೀ ಕೊಟ್ರೇಶ್, ತಹಶೀಲ್ದಾರ್, ಹೊಸಕೋಟೆ | 2 |
| 3)ಶ್ರೀ ಅರುಣ್ ಕುಮಾರ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊಸಕೋಟೆ ಬೆಂಗಳೂರು ಗ್ರಾಮಾಂತರ ಜಿಲ್ಲೆ | 3 |

..2..

<u>ದೂರಿನ ಸಂಕ್ಷಿಪ್ತ ವಿವರಣೆ</u>:-

(ಅ) ದೂರುದಾರರು ತಮ್ಮ ದೂರಿನಲ್ಲಿ ಹೊಸಕೋಟೆ ತಾಲ್ಲೂಕು ಕೊರಟಿ ಗ್ರಾಮದ ಶ್ರೀ ಕೆ.ಸಿ.ಶಂಕರನಾಥ್ ಎನ್ನುವವರು ಬಿ.ಎಂ.ಟಿ.ಸಿ. ಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದು, ಕೊರಟಿ ಗ್ರಾಮ ಪಂಚಾಯಿತಿಗೆ ಸೇರಿದ ಖಾತ ನಂ.14 ರಲ್ಲಿ ಪಂಚಾಯಿತಿ ಹಾಲ್ ಅಂಗನವಾಡಿ ಮತ್ತು ಕೃಷಿ ಸಹಾಯಕ ಭವನ ಇದ್ದು, ಸರ್ಕಾರದ ನಿವೇಶನವಾಗಿರುತ್ತದೆ. ಉಳಿದ ಜಾಗವನ್ನು ಶ್ರೀ ಕೆ.ಸಿ.ಶಂಕರನಾಥ್ ರವರು ಸುಳ್ಳು ದಾಖಲೆ ಸೃಷ್ಟಿಸಿ ಕಾನೂನುಬಾಹಿರವಾಗಿ ತಮ್ಮ ಹೆಸರಿಗೆ ಮಾಡಿಕೊಂಡಿರುತ್ತಾರೆಂದು ದೂರಿರುತ್ತಾರೆ.

(ಆ) 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಶ್ರೀ ಶಂಕರನಾಥ್ ಬಿನ್ ಚಿನ್ನಪ್ಪ ಇವರ ಸ್ವತ್ತಿಗೆ ಸಂಬಂಧಿಸಿದ 2009-10ನೇ ಸಾಲಿನಲ್ಲಿ ನಮೂನೆ 9 ಮತ್ತು 11 ರಲ್ಲಿ ಅಂದಿನ ಕಾರ್ಯದರ್ಶಿ ಶ್ರೀ ಎಸ್.ಹೆಚ್.ನಾರಾಯಣಸ್ವಾಮಿ ಅವರು ಶ್ರೀ ರವಿಕುಮಾರ್ ಬಿನ್ ಚಿನ್ನಪ್ಪ ಅವರ ಹೆಸರಿಗೆ ಕ್ರಯಪತ್ರದ ಮೂಲಕ ನೊಂದಾಯಿಸಿರುತ್ತಾರೆ. ದೂರುದಾರರ ದೂರಿನನ್ವಯ ಚಿನ್ನಪ್ಪ ಅವರಿಗೆ ನೋಟೀಸು ಜಾರಿಮಾಡಿದಾಗ ಈ ಸ್ವತ್ತಿನ ಬಗ್ಗೆ ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸ ಕೋಟೆಯಲ್ಲಿ ಒ.ಎಸ್.374/2013 ಅಂತ ದಾವೆ ದಾಖಲಾಗಿದ್ದು, ಅದು ಚಾಲ್ತಿಯಲ್ಲಿ ಇರುತ್ತದೆ. ಮಾನ್ಯ ನ್ಯಾಯಾಲಯದ ಆದೇಶದಂತೆ ಮುಂದಿನ ಕ್ರಮ ವಹಿಸಲಾಗುವುದು. ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

(ಇ) ದೂರುದಾರರು ತಮ್ಮ ಪ್ರತ್ಯುತ್ತರದಲ್ಲ ಎದುರುದಾರರು ಒ.ಎಸ್.374/2013 ದಾವೆ ಇದೆಯೆಂದು ಕೈಚೆಲ್ಲಿದ್ದಾರೆ. ಆದರೆ ಆ ದಾವೆಯು ಶ್ರೀ ಕೆ.ಆರ್.ನಾಗರಾಜ್ ಮತ್ತು ಚಿನ್ನಮ್ಮ ಅವರ ನಡುವೆಯಿದ್ದು, ಈ ಜಾಗಕ್ಕೆ ಯಾವುದೇ ರೀತಿ ಸಂಬಂಧವಿರುವುದಿಲ್ಲವೆಂದು ವರದಿಸಿರುತ್ತಾರೆ.

(ಈ) ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ, ಪತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ ಆಸ್ತಿ ನಂ.140 ಇದು ಪಂಚಾಯಿತಿ ಖಾಲಿ ನಿವೇಶನವೆಂದು 2009-10ನೇ ಸಾಲಿನ ತೆರಿಗೆ ಬೇಡಿಕೆ ರಿಜಿಸ್ಟರಿನಲ್ಲಿ ನಮೂದಿಸಲಾಗಿದೆ. ಆದರೆ ಇದೇ ಜಾಗವನ್ನು 2009 ರಿಂದ 2014 ರವರೆಗೆ ನಮೂನೆ 9 ಮತ್ತು 11 ರಲ್ಲಿ ಶ್ರೀ ಕೆ.ಸಿ. ರವಿಕುಮಾರ್ ಅವರ ಹೆಸರನ್ನು ಬದಲಾವಣೆ ಮಾಡಿ ಶ್ರೀ ಕೆ.ಸಿ. ಶಂಕರನಾಥ್ ಅವರ ಹೆಸರನ್ನು ನಮೂದು ಮಾಡಿರುತ್ತಾರೆ. ಆದರೆ ಒ.ಎಸ್.374/2013 ದಾವೆಯ ದಾಖಲೆಗಳನ್ನು ಪರಿಶೀಲಿಸಿದಾಗ ಇದನ್ನು ಶ್ರೀ ಕೆ.ಆರ್. ನಾಗರಾಜ್ ಅವರು ಶ್ರೀ ಶಂಕರನಾಥ್ ರವರ ವಿರುದ್ಧ ದಾಖಲಿಸಿದ್ದು, ಆದರೆ ಆ ದಾವೆಯು ವಜಾಗೊಂಡಿರುವುದರಿಂದ ಅದನ್ನು ಪುನ: ಬೋರ್ಡ್ ಮೇಲೆ ತರಲು

ಶ್ರೀ ನಾಗರಾಜ್ ಅವರು ಸಿವಿಲ್ ಮಿಸಲೇನಿಯಸ್ ನಂ.6/2015 ದಾಖಲಿಸಿದ್ದು, ಅದು ಚಾಲಿಯಲ್ಲಿರುತ್ತದೆ. ಒ.ಎಸ್.374/ 2013ರ ದಾವೆಯಲ್ಲಿರುವ ಬಂಜರು ನಂ.37 ಆಸ್ತಿ ನಂ.18 ಅಂತ ಇರುತ್ತದೆ. ಆದರೆ ದೂರಿನಲ್ಲಿ ಶ್ರೀ ಕೆ.ಸಿ. ಶಂಕರನಾಥ್ ಅವರು ಖಾತೆ ಮಾಡಿಸಿಕೊಂಡಿರುವರೆಂದು ಆಪಾದಿಸಿರುವ ಆಸ್ತಿ ನಂ.140 ಆಗಿರುತ್ತದೆ. ಆದ್ದರಿಂದ ದಾವಾ ಆಸ್ತಿಗೂ ಹಾಗೂ ಈ ದೂರಿನಲ್ಲಿರುವ ಸ್ವತ್ತಿಗೂ ಯಾವುದೇ ರೀತಿ ಸಂಬಂಧವಿರುವುದಿಲ್ಲವೆಂದು ವರದಿಸಿರುತ್ತಾರೆ.

(ಉ) ಎದುರುದಾರರು ದೂರಿನಲ್ಲಿ ಆಪಾದಿಸಿರುವ ಅಂಶಗಳನ್ನು ಅಥವಾ ಆಸ್ತಿಯು ಬೇರೆಯೆಂದು ಅಲ್ಲಗೆಳೆದಿರುವುದಿಲ್ಲ. ಆದರೆ ಅವರ ಪ್ರಕಾರ ಈ ಆಸ್ತಿಯ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಚಾಲ್ತಿಯಲ್ಲಿರುತ್ತದೆಂದು ತಿಳಿಸಿರುತ್ತಾರೆ. ಇದರಿಂದ ಕಂಡು ಬರುವುದೇನೆಂದರೆ ಎದುರುದಾರರು ಶ್ರೀ ಕೆ.ಸಿ.ಶಂಕರನಾಥ್ ಅವರ ಹೆಸರಿನಲ್ಲಿ ಅಕ್ರಮವಾಗಿ ಖಾತೆ ಮಾಡಿದ್ದಾರೆಂದು ವರದಿಸಿರುತ್ತಾರೆ.

(ಊ) 2ನೇ ಎದುರುದಾರರು ಶ್ರೀ ಕೊಟ್ರೇಶ್, ತಹಶೀಲ್ದಾರ್, ಹೊಸಕೋಟೆ ಇವರು ಈ ದೂರಿನಲ್ಲಿ ಆಪಾದಿಸಿರುವ ಆಸ್ತಿಯು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುತ್ತದೆ. ಆದರೆ ಮೇಲಾಧಿಕಾರಿಗಳಾಗಿ 3ನೇ ಎದುರುದಾರರು ಇರುತ್ತಾರೆ. ಆದರೆ 2ನೇ ಎದುರುದಾರರು ಕಂದಾಯ ಜಮೀನುಗಳಿಗೆ ಮಾತ್ರ ಅಧಿಕಾರ ಹೊಂದಿರುವುದರಿಂದ ಅವರನ್ನು ಈ ಪ್ರಕರಣದಿಂದ ಕೈಬಿಡಲಾಗಿದೆ ಎಂದು ವರದಿಸಿರುತ್ತಾರೆ.

(ಎ) 1 ಮತ್ತು 3ನೇ ಎದುರುದಾರರು ಶ್ರೀ ಕೆ.ಸಿ.ಶಂಕರನಾಥ್ ಅವರ ಹೆಸರಿನಲ್ಲಿ ಅಕ್ರಮವಾಗಿ ಸರ್ಕಾರಿ ಆಸ್ತಿ ಖಾತೆ ಮಾಡಿರುವ ಬಗ್ಗೆ ಯಾವುದೇ ವಿವರಣೆ ನೀಡದೆ ಕೇವಲ ಸಿವಿಲ್ ದಾವೆ ಚಾಲ್ತಿಯಲ್ಲಿದೆಯೆಂದು ತಿಳಿಸಿರುವುದರಿಂದ ಇನ್ನುಳಿದ ಅಕ್ರಮ ಖಾತೆ ಆಗಿದ್ದನ್ನು ಅವರು ಒಪ್ಪಿಕೊಂಡಂತಾಗಿರುತ್ತದೆ. ಈ ರೀತಿ ಗ್ರಾ.ಪಂ.ಯ ವ್ಯಾಪ್ತಿಯಲ್ಲಿ ಅನಧಿಕೃತ ಆಸ್ತಿಗಳ ನೋಂದಣಿಯನ್ನು ನಿಯಂತ್ರಿಸು ಬಗ್ಗೆ ಕರ್ನಾಟಕ ಸರ್ಕಾರವು ಸುತ್ತೋಲೆ ಸಂ:ಗ್ರಾಅಪ 553 ಗ್ರಾಪಂಅ 2012, ದಿ:04-01-2013 ರಂದು ಹೊರಡಿಸಿರುತ್ತದೆ. ಆದರೆ ಎದುರುದಾರರು ಈ ಸುತ್ತೋಲೆಯ ಅಂಶಗಳನ್ನು ಉಲ್ಲಂಘಿಸಿದ್ದಾರೆಂದು ಕಂಡುಬರುತ್ತದೆ. ಆದ್ದರಿಂದ 1 ಮತ್ತು 3ನೇ ಎದುರುದಾರರು ಶ್ರೀ ಕೆ.ಸಿ.ಶಂಕರನಾಥ್ ಅವರ ಹೆಸರಿನಲ್ಲಿ ಆಸ್ತಿ ನಂ.140 ಅಂತ ಸರ್ಕಾರಿ ಖಾಲಿ ಜಾಗವನ್ನು ಅಕ್ರಮವಾಗಿ ಖಾತೆ ಮಾಡಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ವರದಿಸಿರುತ್ತಾರೆ.

ಆದ್ದರಿಂದ 1 ಮತ್ತು 3ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು-1966ರ ನಿಯಮ-3(1) (i), (ii) ಮತ್ತು (iii) ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ರ ಕಲಂ-12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಎದುರುದಾರರ

..4..

ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು-1957ರ ನಿಯಮ-14(ಎ) ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ 1ನೇ ಎದುರುದಾರರಾದ ಶ್ರೀ ಚನ್ನಪ್ಪ,ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೈಲನರಸಾಪುರ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು ಹಾಗೂ 3ನೇ ಎದುರುದಾರರಾದ ಶ್ರೀ ಅರುಣ್ ಕುಮಾರ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊಸಕೋಟೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1) ರ (i), (ii) ಮತ್ತು (iii) ಅಡಿಯಲ್ಲಿ ದುರ್ನಡತೆ ಎಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಮಾಡಿರುವ ಶಿಫಾರಸ್ಸಿನ ಅನ್ವಯ, ಆಪಾದಿತ ಅಧಿಕಾರಿಯ ವಿರುದ್ಧ ಕರ್ತವ್ಯ ಲೋಪದಕುರಿತು ಶಿಸ್ತುಕ್ರಮ ಕೈಗೊಳ್ಳಲು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಗಳು, 1957ರ ನಿಯಮ-14(ಎ) ರಡಿಯಲ್ಲಿ 1, 3ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಲುವಾಗಿ ಸದರಿ ನಿಯಮಗಳ ನಿಯಮ-14(ಎ) ರಡಿಯಲ್ಲಿ ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 140 2017,ಬೆಂಗಳೂರು,ದಿನಾಂಕ: 24-07-2017</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ 1ನೇ ಎದುರುದಾರರಾದ ಶ್ರೀ ಚನ್ನಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೈಲನರಸಾಪುರ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು ಇವರಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು)ನಿಯಮಾವಳಿ 1957ರ ನಿಯಮ 214(2)(ಬಿ)(1)ರಡಿ ಅನುಮತಿ ನೀಡುತ್ತಾ, 3ನೇ ಎದುರುದಾರರಾದ ಶ್ರೀ ಅರುಣ್ ಕುಮಾರ್,ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಹೊಸಕೋಟೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪ ಲೋಕಾಯುಕ್ತ, ಕರ್ನಾಟಕ ಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

24/07/2017

(ಎಸ್ ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ&ಸಿ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು-01

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.